**<u>ಸಾಕ್ಷಿಯನ್ನು ದಿನಾಂಕ 05.02.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ ಎಂಐ ವಕೀಲರಿಂದಃ</u>**

ನಿಮ್ಮ ಅಜ್ಜ ಮುನಿವೆಂಕಟಪ್ಪ ಯಾವ ವರ್ಷ ತೀರಿಕೊಂಡಿದ್ದರು ಎಂದರೆ ಸಾಕ್ಷಿ ವರ್ಷ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಅಜ್ಜಿ ಯಾವ ವರ್ಷ ತೀರಿಕೊಂಡಿದ್ದರು ಎಂದು ನೆನಪಿಲ್ಲ. ನನ್ನ ಸೋದರ ಮಾವ ಯಾವ ವರ್ಷ ತೀರಿಕೊಂಡಿದ್ದರು ಎಂದು ನೆನಪಿಲ್ಲ. ಕೊಡದವಾಡಿ ಗ್ರಾಮಕ್ಕೆ ನನಾಗಲೀ ನನ್ನ ತಾಯಿಯಾಗಲೀ ಹೋಗುತ್ತಿರಲ್ಲಿಲ್ಲ ಅದ ಕಾರಣವೇ ನನಗೆ ನನ್ನ ಅಜ್ಜ, ಅಜ್ಜಿ ಮತ್ತು ಸೋದರ ಮಾವ ಮೃತ ಪಟ್ಟ ವರ್ಷ ನೆನಪಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯನ್ನು ಅದೇ ಊರಿನಲ್ಲಿಯೇ ಮದುವೆ ಮಾಡಿಕೊಟ್ಟಿದ್ದರಿಂದ ಪ್ರತಿವಾದಿಯೇ ನನ್ನ ಅಜ್ಜ, ಅಜ್ಜಿ ಮತ್ತು ಸೋದರ ಮಾವನನ್ನು ಅವರು ಸಾಯುವವರೆಗೂ ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ದಾವಾ ಐಟಂ ನಂ 1 ಮತ್ತು

2 ರಲ್ಲಿ ಮೂರು ಅಂಗಡಿಗಳು ಇವೆ. ಅ ಅಂಗಡಿಗಳು 3 ಗುಂಟೆ ವಿಸ್ತೀರ್ಣದಲ್ಲಿವೆ. ಸರ್ವೆ ನಂ 4/1 ರ ಒಟ್ಟು ವಿಸ್ತೀರ್ಣ ಒಂದೂವರೆ ಎಕರೆ. ಅ ಒಂದೂವರೆ ಎಕರೆ ಜಮೀನಿನಲ್ಲಿ ಮುನಿಶಾಮಿ, ನಾರೆಪ್ಪ ಮತ್ತು ನನ್ನ ತಾತ ಮುನಿವೆಂಕಟಪ್ಪ ಸ್ವಾದೀನದಲ್ಲಿದ್ದಾರೆ. 18 ಗುಂಟೆ ಜಮೀನಿನಲ್ಲಿ ನಮ್ಮ ತಾತ ಮುನಿವೆಂಕಟಪ್ಪ ಸ್ವಾದೀನದಲ್ಲಿದ್ದಾರೆ. ಮುನಿಶಾಮಿ ಮತ್ತು ನಾರೆಪ್ಪನವರು ಅ ಸರ್ವೆ ನಂಬರ್ ನಲ್ಲಿ ಎಷ್ಟು ಗುಂಟೆ ಜಮೀನಿನ ಸ್ವಾದೀನದಲ್ಲಿದ್ದಾರೆಂದು ನನಗೆ ನೆನಪಿಲ್ಲ. 3 ಅಂಗಡಿಗಳನ್ನು ನಿರ್ಮಿಸಿ ಈಗ್ಗೆ 5 ವರ್ಷ ಕಳೆದಿದೆ ಎಂದರೆ ಸರಿ. ಅ ಅಂಗಡಿಯನ್ನು ಪ್ರತಿವಾದಿ ನಿಮಿರ್ಸುವಾಗ ಈ ದಾವೆಯನ್ನು ಸಲ್ಲಿಸಿದ್ದೇವು ಎಂದರೆ ಸಾಕ್ಷಿ ಅ ಅಂಗಡಿಗಳನ್ನು ನನ್ನ ತಂದೆಯೇ ನಿರ್ಮಿಸಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆ ಅ ಅಂಗಡಿಗಳನ್ನು ನಿರ್ಮಿಸಿದ ಬಗ್ಗೆ ದಾಖಲೆಗಳು ಇಲ್ಲ.

ಅ ಅಂಗಡಿಗಳು ಪ್ರತಿವಾದಿ ಸಲ್ಲಿಸಿರುವ ವಿಲ್ ನಲ್ಲಿ ಇವೆಯೆಂದರೆ ಸರಿ. ಅ ಅಂಗಡಿಗಳನ್ನು ನಮ್ಮ ತಂದೆ ನಿರ್ಮಿಸಿಲ್ಲ, ಪ್ರತಿವಾದಿಯೇ ನಿರ್ಮಿಸಿದ್ದಾರೆಂದರೆ ಸುಳ್ಳು. ದಾವಾ ಐಟಂ ನಂ 3 ನಮ್ಮತಾತ ಮುನಿವೆಂಕಟಪ್ಪನಿಗೆ 1982 ರಲ್ಲಿ ಮಂಜೂರಾಗಿತ್ತು ಎಂದರೆ ಸರಿ. ನಮ್ಮ ತಾತನಿಗೆ ದಾವಾ ಐಟಂ 3 ಮಂಜೂರಾದ ಕಾರಣ ನಮಗೆ ಅ ಅಸ್ತಿಯ ಮೇಲೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 1 ರಲ್ಲಿ ಅಂಗಡಿಗಳನ್ನು ನಿರ್ಮಿಸಿದ್ದಾರೆ. ದಾವಾ ಐಟಂ ನಂ 2 ರಲ್ಲಿ ಅಂಗಡಿಗಳನ್ನು ನಿರ್ಮಿಸಿದ್ದಾರೆಂದರೆ ದಾವಾ ಐಟಂ ನಂ 1 ರಲ್ಲಿ ಅಲ್ಲಾ ಎಂದರೆ ಸಾಕ್ಷಿ ಸರ್ವೆ ನಂ 4 ರಲ್ಲಿ

ನಿರ್ಮಿಸಿದ್ದಾರೆ ಎಂದು ನುಡಿಯುತ್ತಾರೆ. ಅಂಗಡಿಗಳನ್ನು ಯಾವ ದಾವಾ ಐಟಂ ನಂಬರ್ ನಲ್ಲಿ ನಿರ್ಮಿಸಿದ್ದಾರೆಂದು ನಾನು ಇದುವರೆಗೂ ತಿಳಿದುಕೊಂಡಿಲ್ಲ ಎಂದರೆ ಸುಳ್ಳು. ಅಂಗಡಿಗಳ ಚೆಕ್ಕು ಬಂದಿ ಪೂರ್ವಕ್ಕೆ ಃ ಮುನಿಶಾಮಿ, ಪಶ್ಚಿಮಕ್ಕೆಃ ಲಘುಮರೆಡ್ಡಿ, ಉತ್ತರಕ್ಕೆಃ ನಮ್ಮದೇ ಸ್ವಂತ, ದಕ್ಷಿಣಕ್ಕೆಃ ರಸ್ತೆ ಇರುತ್ತದೆ.

ದಾವಾ ಐಟಂ ನಂ 1 ರ ಚೆಕ್ಕುಬಂದಿ ಪಶ್ಚಿಮಕ್ಕೆಃ ರಸ್ತೆ, ದಕ್ಷಿಣಕ್ಕೆಃ ಕೆರೆ, ಉತ್ತರಕ್ಕೆಃ ದೇವಸ್ಥಾನ, ಪೂರ್ವಕ್ಕೆಃ ನೆನಪಿಲ್ಲ. ನಾನು ಹೇಳಿದ ಚೆಕ್ಕು ಬಂದಿಯ ಅಸ್ತಿ ಸರ್ವೆ ನಂ 4/1 ರಲ್ಲಿ ಯಾವುದು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ 5 ರಿಂದ 10 ರ ಅಸ್ತಿಗಳ ಚೆಕ್ಕುಬಂದಿ ನೆನಪಿಲ್ಲ. ದಾವಾ ಐಟಂ ನಂ 4 ರಿಂದ 10 ರಲ್ಲಿ ಪ್ರತಿವಾದಿಗೆ ¼ ಭಾಗ ಇದೆ ಎಂದರೆ ಸರಿ. ದಾವಾ ಐಟಂ ನಂ 1 ರಿಂದ 3 ರಲ್ಲಿ ವಾದಿಯರಿಗೆ ಯಾವುದೇ ಹಕ್ಕು ಇಲ್ಲಾ ಎಂದರೆ ಸರಿಯಲ್ಲ.

ದೇವಣ್ಣನವರ ಮೂರು ಮಕ್ಕಳನ್ನು ಸೇರಿಸದೇ ಕೇವಲ ಮುನಿವೆಂಕಟಪ್ಪನ ಮಕ್ಕಳನ್ನು ಸೇರಿಸಿ ದಾವೆಯನ್ನು ಸಲ್ಲಿಸಿದ್ದೇಃವೆಂದರೆ ಸರಿಯಲ್ಲ. ದಾವಾ ಐಟಂ ನಂ 4 ರಿಂ 10 ದೇವಣ್ಣನವರ ಕಾಲದಿಂದಲೂ ವಿಭಾಗಗಳು ಅಗಿಲ್ಲ, ಜಂಟಿಯಾಗಿ ದಾಖಲೆಗಳು ಬರುತ್ತಿವೆ ಎಂದರೆ ಸರಿಯಲ್ಲ. ದೇವಣ್ಣನವರ ಎಲ್ಲಾ ವಾರಸುದಾರರನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ನನ್ನ ತಾತನಿಗೆ ಬಂದ ಅಸ್ತಿಗೆ ಸಂಬಂದಿಸಿದಂತೆ ಮಾತ್ರ ದಾವೆಯನ್ನು ಸಲ್ಲಿಸಿದ್ದೇನೆಂದು ನುಡಿಯುತ್ತಾರೆ. ದಾವಾ ಐಟಂ ನಂ 4 ರಿಂ 10 ನನ್ನ ತಾತ ಮುನಿವೆಂಕಟಪ್ಪನವರಿಗೆ ಬಂದಿತ್ತು ಎಂಬ ಬಗ್ಗೆ ಯಾವುದೆ ದಾಖಲೆಯನ್ನು

ನಾನು ಹಾಜರು ಪಡಿಸಿಲ್ಲ ಎಂದರೆ ಸರಿ. ದಾವಾ ಐಟಂ ನಂ 2 ಮತ್ತು 3 ನಮ್ಮತಾತ ಮುನಿವೆಂಕಟಪ್ಪನ ಸ್ವಯಾರ್ಜಿತ ಅಸ್ತಿಗಳಾಗಿರುವುದರಿಂದ ಅವುಗಳನ್ನು ನಮ್ಮ ತಾತ ಪ್ರತಿವಾದಿಗೆ ದಾನ ಪತ್ರ ಮತ್ತು ವಿಲ್ ನಾಮೆ ಮೂಲಕ ನೀಡಿರುವುದರಿಂದ ವಾದಿಗಳಿಗೆ ಯಾವುದೇ ಹಕ್ಕು ಅ ಅಸ್ತಿಗಳ ಮೇಲೆ ಇಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾನ ಪತ್ರ ಮತ್ತು ವಿಲ್ ನಾಮೆ ಅಗಿರುವ ವಿಚಾರ ವಾದಿಗಳಿಗೆ ತಿಳಿದಿದ್ದರೂ ಸಹ ಪ್ರತಿವಾದಿ ಅಂಗಡಿಗಳನ್ನು ನಿರ್ಮಿಸುವಾಗ ಈ ದಾವೆಯನ್ನು ಸಲ್ಲಿಸಿದ್ದಾರೆಂದರೆ ಸರಿಯಲ್ಲ. ದಾವಾ ಐಟಂ ನಂ 2 ಅನ್ನು ನನ್ನ ತಾತ ಮತ್ತು ಅಜ್ಜಿ ತೀರಿಕೊಂಡ ಬಳಿಕ 2008 ರಲ್ಲಿ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಕೊಂಡಿದ್ದಾರೆಂದರೆ ಸಾಕ್ಷಿ ಸುಳ್ಳು ದಾಖಲೆ ಸೃಷ್ಟಿಸಿ ಖಾತೆ ಮಾಡಿಕೊುಂಡಿದ್ದಾರೆಂದು ನುಡಿಯುತ್ತಾರೆ. ದಾವಾ ಐಟಂ ನಂ 3 ದಾನಪತ್ರ ಅದ ಬಳಿಕವೇ 2003 ರಲ್ಲಿ ಪ್ರತಿವಾದಿಯ ಹೆಸರಿಗೆ ಖಾತೆಯಾಗಿದೆ ಅ ವಿಚಾರ ವಾದಿಯರಿಗೆ ತಿಳಿದಿತ್ತು ಎಂದರೆ ಸುಳ್ಳು. ನನಗಾಗಲೀ ವಾದಿಯರಿಗಾಗಲೀ ದಾವಾ ಐಟಂ ನಂ 2 ಮತ್ತು 3 ರ ಮೇಲೆ ಯಾವುದೇ ಹಕ್ಕು ಇಲ್ಲಾ ಎಂದರೆ ಸುಳ್ಳು. ದಾವಾ ಐಟಂ ನಂ 2 ಮತ್ತು 3 ರ ಮೇಲೆ ದಾವೆ ಸಲ್ಲಿಸಲು ಯಾವುದೇ ಸಕಾರಣಗಳು ಇಲ್ಲಾ ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.